**ಬಾಲಿವುಡ್ ಹೀರೊ ಆಗಬೇಕು ಎಂಬ ಕನಸು ಕಾಣುತ್ತಲೇ ಬೆಳೆದ ಜೈದ್ ಖಾನ್ ಈಗ ಕನ್ನಡದ ನೆಲದಲ್ಲಿಯೇ ನೆಲೆ ಕಂಡುಕೊಳ್ಳುವ ಛಲವನ್ನು ಆವಾಹಿಸಿಕೊಂಡಿದ್ದಾರೆ.**

ಮಾಡಬೇಕಲ್ಲವೇ ಎಂದು ಅನಿಸಲು ಶುರುವಾಯ್ತು. ಕನ್ನಡದಲ್ಲಿ ಸಿನಿಮಾ ಮಾಡದೇ ಹೋದರೆ ನಾನು ಹೇಗೆ ಕನ್ನಡಿಗನಾಗುತ್ತೇನೆ? ಮೊದಲು ಕನ್ನಡದಲ್ಲಿ ಸಿನಿಮಾ ಮಾಡಬೇಕು. ಕನ್ನಡ ಚಿತ್ರರಂಗಕ್ಕೆ ನನ್ನಿಂದ ಏನು ಕೊಡುಗೆ ನೀಡಲು ಸಾಧ್ಯವಾಗುತ್ತದೆಯೋ ನೀಡಬೇಕು. ನಂತರ ಬೇಕಾದರೆ ಬಾಲಿವುಡ್‌ಗೆ ಬಂದು ಸಿನಿಮಾ ಮಾಡಬೇಕು ಅನಿಸಿತು. ಈ ನಿರ್ಧಾರದಿಂದಲೇ ಮುಂಬೈನಿಂದ ಮತ್ತೆ ಬೆಂಗಳೂರಿಗೆ ಬಂದೆ' ಎಂದು ತವರಿನ ನೆಲಕ್ಕೆ ಮರಳಿದ ಹಿಂದಿನ ಕಾರಣವನ್ನು ಅವರು ವಿವರಿಸುತ್ತಾರೆ.

ಬೆಂಗಳೂರಿಗೆ ಬಂದ ಅವರು ಸುಮ್ಮನೇ ಕೂಡಲಿಲ್ಲ. ಕನ್ನಡ ಭಾಷೆಯನ್ನು ಚೆನ್ನಾಗಿ ಮಾತಾಡಲು, ಓದಲು, ಬರೆಯಲು ಅಭ್ಯಾಸ ಮಾಡಿಕೊಂಡರು. ಹಾಗೆಯೇ ಒಳ್ಳೆಯ ಕಥೆಗಾಗಿ ಹುಡುಕಾಟ ನಡೆಸಲು ಆರಂಭಿಸಿದರು. 'ಹೇಗೋ ಪ್ರಭಾವ ಇದೆ ಅನ್ನುವ ಕಾರಣಕ್ಕೆ ಸಿನಿಮಾ ಮಾಡಲು ನಾನು ಸಿದ್ಧನಿರಲಿಲ್ಲ. ನನ್ನ ಲಾಂಚ್ ಒಂದು ಒಳ್ಳೆಯ ಮತ್ತು ವಿಭಿನ್ನ ಸಿನಿಮಾ ಮೂಲಕವೇ ಆಗಬೇಕು ಎಂದು ನಿಶ್ಚಯಿಸಿದ್ದೆ. ಹಾಗಾಗಿ ಕಥೆಯ ಹುಡುಕಾಟದಲ್ಲಿ ನಾಲ್ಕು ವರ್ಷ ಕಳೆದಿದ್ದೇನೆ' ಎನ್ನುತ್ತಾರೆ ಜೈದ್.

ಈ ಹುಡುಕಾಟದಲ್ಲಿ ಅವರಿಗೆ ಸಾಕಷ್ಟು ಅವಕಾಶಗಳೂ ಬಂದಿದ್ದವು. ಆದರೆ ಕಥೆ ಚೆನ್ನಾಗಿಲ್ಲ ಅನ್ನುವ ಕಾರಣಕ್ಕಾಗಿಯೇ ಅವರು ಅದನ್ನೆಲ್ಲ ತಿರಸ್ಕರಿಸಿದ್ದಾರೆ. 'ನಾನು ಚಿತ್ರರಂಗಕ್ಕೆ ಹೊಸಬ. ನನ್ನ ಸಿನಿಮಾ ಬರುತ್ತದೆ ಎಂದು ಯಾರೂ ಕಾಯುತ್ತಿರುವುದಿಲ್ಲ. ಆದರೆ ಒಮ್ಮೆ ನಾನು ಸಿನಿಮಾ ಮಾಡಿದೆನೆಂದರೆ ಜನರು ಅದನ್ನ ನೋಡಿ ಚಪ್ಪಾಳೆ ತಟ್ಟುವ ಹಾಗಿರಬೇಕು. ನಾನು ಎಷ್ಟು ವರ್ಷ ಶ್ರಮವಹಿಸಿದ್ದೀನಿ ಎಂದು ಪ್ರೇಕ್ಷಕ ನೋಡುವುದಿಲ್ಲ. ಅವನಿಗೆ ಇಷ್ಟವಾದರೆ ಚಪ್ಪಾಳೆ ತಟ್ಟುತ್ತಾನೆ; ಇಲ್ಲವಾದರೆ ಇಲ್ಲ. ಸಲ್ಮಾನ್ ಖಾನ್ ಸಿನಿಮಾವೇ ಕಥೆ ಚೆನ್ನಾಗಿಲ್ಲದಿದ್ದರೆ ಜನರು ನೋಡುವುದಿಲ್ಲ. ಹಾಗಿರುವಾಗ ಜೈದ್ ಖಾನ್ ಸಿನಿಮಾಗಳನ್ನು ನೋಡುತ್ತಾರೆಯೇ?' ಎಂದು ನಗುವ ಅವರ ಕಾಯುವಿಕೆಗೆ ಪೂರ್ಣವಿರಾಮ ಹಾಕಿದ್ದು 'ಬೆಲ್‌ಬಾಟಂ' ಸಿನಿಮಾ.

ಬೆಲ್ ಬಾಟಂ ಸಿನಿಮಾ ನೋಡಿ ಥ್ರಿಲ್ ಆದ ಜೈದ್ ಅದರ ನಿರ್ದೇಶಕ ಜಯತೀರ್ಥ ಅವರನ್ನು ಕರೆಸಿ ಮಾತಾಡಿದರು. ಅವರ ಬಳಿ ಒಂದು ಕಥೆಯ ಎಳೆ ಸಿದ್ಧವಿತ್ತು. ಅದನ್ನು ಕೇಳಿದ್ದೇ ನಾನು ಮಾಡಬೇಕಾಗಿರುವುದು ಇಂಥದ್ದೇ ಸಿನಿಮಾ ಎಂದು ಜೈದ್‌ಗೆ ಅನಿಸಿಹೋಯಿತು. ಮತ್ತಾರು ತಿಂಗಳಲ್ಲಿ ಸ್ಕ್ರಿಪ್ಟ್ ಸಿದ್ಧವಾಯ್ತು. 'ಬನಾರಸ್' ಚಿತ್ರದ ಮೂಲಕ ಜೈದ್ ಕನ್ನಡ ಚಿತ್ರರಂಗಕ್ಕೆ ಅಡಿಯಿಡಲು ಸಜ್ಜಾಗಿದ್ದಾರೆ. ಈಗ ಚಿತ್ರದ ತೊಂಬತ್ತರಷ್ಟು ಭಾಗ ಚಿತ್ರೀಕರಣವೂ ಮುಗಿದಿದೆ. ಎರಡು ಹಾಡಷ್ಟೇ ಬಾಕಿ ಇದೆ. ಡಬ್ಬಿಂಗ್ ಕೂಡ ಮುಗಿದಿದೆ. ಚಿತ್ರದ ತುಣುಕುಗಳನ್ನು ನೋಡಿ ಸ್ವತಃ ಜೈದ್ ಅವರೇ 'ನಾನು ಇಷ್ಟೊಂದು ಚೆನ್ನಾಗಿ ನಟನೆ ಮಾಡ್ತೀನಾ' ಎಂದು ರೋಮಾಂಚನಗೊಂಡಿದ್ದಾರೆ. ಕೊರೊನಾ ತುರ್ತು ಪರಿಸ್ಥಿತಿ ತಿಳಿಯಾದ ಮೇಲೆ ಉಳಿದ ಭಾಗದ ಚಿತ್ರೀಕರಣ ಮುಗಿಸಿ ಚಿತ್ರವನ್ನು ತೆರೆಯ ಮೇಲೆ ತರುವ ಯೋಜನೆ ಅವರದ್ದು.

'ಬನಾರಸ್ ಸಿನಿಮಾ ಸ್ಟಾರ್ ನಟರಿಗೆ ಒಗ್ಗುವ ಕಥೆಯಲ್ಲ. ಹಿಂದಿಯಲ್ಲಿ ಆಯುಷ್ಮಾನ್ ಖುರಾನಾ ಮಾಡುತ್ತಾರಲ್ಲಾ, ಆ ಮಾದರಿಯ ಸಿನಿಮಾ. ಇಂಥ ಸಿನಿಮಾಗಳನ್ನು ಮಾಡುವುದು ರಿಸ್ಕ್ ಕೂಡ ಹೌದು. ಗೆದ್ದರೆ ದೊಡ್ಡ ಹಿಟ್ ಆಗುತ್ತದೆ; ಇಲ್ಲವೇ ಪೂರ್ತಿಯಾಗಿ ಸೋತು ಹೋಗುತ್ತದೆ. ಆದರೆ ನನಗೆ ಈ ಕಥೆ ಇಷ್ಟವಾಗಿದೆ. ಹಾಗಾಗಿ ಈ ರಿಸ್ಕ್ ತೆಗೆದುಕೊಂಡೆ' ಎಂದು ಅವರು ಸಿನಿಮಾದ ಬಗ್ಗೆ ವಿವರಣೆ ನೀಡುತ್ತಾರೆ.

'ನ್ಯಾಷನಲ್ ಖಾನ್ ಪ್ರೊಡಕ್ಷನ್' ಎಂಬ ನಿರ್ಮಾಣ ಸಂಸ್ಥೆಯನ್ನೂ ಪ್ರಾರಂಭ ಮಾಡಿರುವ ಜೈದ್, ಸದ್ಯಕ್ಕೆ ತಮ್ಮ ಪ್ರತಿಭೆಯನ್ನು ಸಾಬೀತುಗೊಳಿಸುವ ಧಾವಂತದಲ್ಲಿದ್ದಾರೆ. ನಿಮ್ಮ ನಿರ್ಮಾಣ ಸಂಸ್ಥೆಯ ಮೂಲಕ ಬೇರೆಯವರ ಸಿನಿಮಾಗಳನ್ನೂ ನಿರ್ಮಾಣ ಮಾಡುತ್ತೀರೇ ಎಂದು ಕೇಳಿದರೆ, 'ಸದ್ಯಕ್ಕೆ ನಾನು ಸ್ವಾರ್ಥಿ. ನಾನು ಮೊದಲು ಕನ್ನಡ ಚಿತ್ರರಂಗದಲ್ಲಿ ಗಟ್ಟಿಯಾಗಿ ಹೆಜ್ಜೆ ಊರಬೇಕು. ಹೆಸರು ಮಾಡಬೇಕು. ಅಲ್ಲಿಯವರೆಗೆ ಬೇರೆಯವರ ಸಿನಿಮಾಗಳನ್ನು ನಿರ್ಮಾಣ ಮಾಡುವ ಆಲೋಚನೆ ಇಲ್ಲ. ಆದರೆ ಭವಿಷ್ಯದಲ್ಲಿ ಖಂಡಿತ ಅಂಥ ಪ್ರಯತ್ನಗಳನ್ನು ಮಾಡುತ್ತೇನೆ. ನಮ್ಮ ನಿರ್ಮಾಣ ಸಂಸ್ಥೆಯಿಂದ ವಿಭಿನ್ನ ಚಿತ್ರಗಳನ್ನು ಕನ್ನಡ ಚಿತ್ರರಂಗಕ್ಕೆ ನೀಡುತ್ತೇನೆ' ಎನ್ನುತ್ತಾರೆ ಜೈದ್.

'ಬಾಲಿವುಡ್‌ಗಿಂತಲೂ ಕನ್ನಡ ಚಿತ್ರರಂಗದಲ್ಲಿ ನೆಲೆಗೊಳ್ಳುವುದೇ ನನಗೆ ಮುಖ್ಯ' ಎಂದು ಸ್ಪಷ್ಟವಾಗಿ ಹೇಳುವ ಅವರು 'ಬಾಲಿವುಡ್‌ನಿಂದ ಆಫರ್ ಬಂದರಷ್ಟೇ ಆ ಬಗ್ಗೆ ಯೋಚಿಸುತ್ತೇನೆ. ನಾನಾಗಿಯೇ ಅವಕಾಶ ಕೇಳಿಕೊಂಡು ಹೋಗಲಾರೆ' ಎನ್ನುತ್ತಾರೆ. ■

